ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

(೧) ಹೌದು.

(೨) ಅಂದಾಜು ವೆಚ್ಚದ ರೂ. ೧೨.೮೬ ಕೋಟಿಗಳ ಪೈಕಿ ೫೫೪.೦೦ ಲಕ್ಷ ರೂ.ಗಳನ್ನು ಸರ್ಕಾರವು ಸಾಲವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ನೀಡುವುದು.

(೩) ಈ ಯೋಜನೆಯ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಟೆಂಡರ್‌ಗಳನ್ನು ಕರೆಯುವ ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಯನ್ನು ೩ ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಕಾರ್ಯಕ್ಷೇತ್ರದ ಬಗ್ಗೆ.

೮೬ (೩೦೩) ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯನ್ನು ಲಾಭ ನಷ್ಟ ರಹಿತ ಆಧಾರದ ಮೇಲೆ ಕಾರ್ಯನಿರ್ವಹಿಸುವ ಸಂಸ್ಥೆಯಾಗಿ ಸ್ಥಾಪಿಸಿರುವುದು ನಿಜವೆ?

ಆ) ಈಗ ಜಲಮಂಡಲಿಯು ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜು ಯೋಜನೆಗಳ ಸಂಖ್ಯೆ ಎಷ್ಟು?

ಇ) ಈ ಕಾರ್ಯ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುವುದು?

ಈ) ಲಾಭ ನಷ್ಟ ರಹಿತ ಆಧಾರದ ಮೇಲೆ ಎಷ್ಟು ಪಟ್ಟಣಗಳಿಗೆ ಜಲಮಂಡಲಿಯು ನೀರನ್ನು ಸರಬರಾಜು ಮಾಡುತ್ತಿದೆ?

ಉ) ರಾಜ್ಯ ಸರ್ಕಾರದಿಂದ ಮತ್ತು ಕೇಂದ್ರ ಸರ್ಕಾರದಿಂದ ಸಹಾಯ ಧನವಾಗಿ ಮತ್ತು ಸಾಲವಾಗಿ ಜಲಮಂಡಲಿಯು ಪಡೆಯುತ್ತಿರುವ ಹಣದ ಮೊತ್ತ ಎಷ್ಟು?

ಊ) ಪ್ರಸಕ್ತ ಕಾರ್ಯ ಪ್ರಗತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸದೆ ಸದ್ಯದ ಮಂಡಲಿಯ ಆರ್ಥಿಕ ಪರಿಸ್ಥಿತಿಯಲ್ಲಿ ಹೊಸ ಯೋಜನಾ ಕಾರ್ಯಗಳನ್ನು ಕೈಗೆತ್ತಿಕೊಳ್ಳುವುದು ಸಾಧ್ಯವೆ?

ಋ) ರಾಜ್ಯ, ಕೇಂದ್ರ ಸರ್ಕಾರಗಳಿಗೆ ಜಿ.ವ ವಿಮಾ ನಿಗಮಕ್ಕೆ ಹುಡ್ಕೋ ಹಾಗೂ ಇತರೆ ಆರ್ಥಿಕ ಸಂಸ್ಥೆಗಳಿಗೆ ಜಲಮಂಡಲಿಯು ನೀಡಬೇಕಾಗಿರುವ ಬಾಕಿಯ ಮೊತ್ತ ಎಷ್ಟು, ಈ ಬಾಕಿಯನ್ನು ಮಂಡಲಿಯು ತೀರಿಸುವ ಸ್ಥಿತಿಯಲ್ಲಿದೆಯೇ, ಇಲ್ಲವಾದ್ದಲ್ಲಿ ಸರ್ಕಾರವು ಮಂಡಲಿಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ೩೯.

ಇ) ೪,೩೭೨.೦೦ ಲಕ್ಷ ರೂ.ಗಳು

ಈ) ೧೧.

ಉ) ರಾಜ್ಯ ಸರ್ಕಾರದಿಂದ ಮಂಡಲಿಗೆ ಈವರೆವಿಗೆ ೬೯೭೨.೮೫ ಲಕ್ಷ ರೂ.ಗಳನ್ನು ಸಹಾಯ ಧನವಾಗಿ ಹಾಗೂ ಸಾಲವಾಗಿ ನೀಡಲಾಗಿದೆ. ಕೇಂದ್ರ ಸರ್ಕಾರದಿಂದ ಯಾವುದೇ ಹಣವನ್ನು ಮಂಡಲಿಗೆ ನೀಡಲಾಗಿರುವುದಿಲ್ಲ. (ಅಭಾವ ಪರಿಹಾರ ಕಾಮಗಾರಿಗಳಿಗೆ ನೀಡುವ ಹಣದ ಹೊರತಾಗಿ)

ಊ) ಇಲ್ಲ.

ಖ) ದಿನಾಂಕ ೧ನೇ ಏಪ್ರಿಲ್ ೧೯೮೭ ರಲ್ಲಿ ಬಾಕಿ ಇರುವ ವಿವರಗಳು :—

ರಾಜ್ಯ ಸರ್ಕಾರಕ್ಕೆ	೬೨೯.೯೧ ಲಕ್ಷ ರೂ.ಗಳು
ಜೀವ ವಿಮಾ ನಿಗಮಕ್ಕೆ	೪೭೬೪.೩೬ ಲಕ್ಷ ರೂ.ಗಳು
ಮಾರುಕಟ್ಟೆ ಸಾಲಕ್ಕೆ	೨೨೭೨.೫೩ ಲಕ್ಷ ರೂ.ಗಳು
ಒಟ್ಟು	೭೬೬೬.೮೦ ಲಕ್ಷ ರೂ.ಗಳು

ಗೃಹ ಬಳಕೆಗಾಗಿ ಸರಬರಾಜು ಮಾಡುವ ನೀರಿನ ದರವನ್ನು ಲಾಭ ನಷ್ಟ ರಹಿತ ಆಧಾರದ ಮೇಲೆ ಪರಿಷ್ಕರಿಸಲಾಗುತ್ತಿದೆ ಹಾಗೂ ಗೃಹೇತರ ಬಳಕೆಗಾಗಿ ಕೊಡುವ ನೀರಿನ ದರವನ್ನು ಅದರ ೨ ಅಥವಾ ೩ ರಷ್ಟು ಹೆಚ್ಚಿಸಲಾಗುತ್ತಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಆದಾಯ ಮತ್ತು ವೆಚ್ಚಗಳನ್ನು ಕುರಿತಂತೆ

೮೭ (೩೦೫) ಶ್ರೀ ಎಂ. ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯ ಪ್ರತಿ ವರ್ಷ ಇಂಧನ, ಸಾಗಾಣಿಕೆ ಹಾಗೂ ನಿರ್ವಹಣಾ ಸಿಬ್ಬಂದಿಗಾಗಿ ಮಾಡುವ ಶೇಕಡವಾರು ವೆಚ್ಚದ ಪ್ರಮಾಣ?

ಆ) ಜಲ ಮಂಡಲಿಯು ಪಡೆಯುವ ಸಾಲದ ಹಾಗೂ ಸಹಾಯ ಧನದ ಒಟ್ಟು ಮೊತ್ತದಲ್ಲಿ ಪ್ರತಿ ವರ್ಷ ಕೇವಲ ಶೇಕಡ ೧೦ ರಷ್ಟನ್ನು ಮಾತ್ರವೇ ಕಾರ್ಯಪ್ರಗತಿಯಲ್ಲಿರುವ ಯೋಜನೆಗಳಿಗಾಗಿ ಬಳಸಲಾಗುತ್ತಿರುವುದು ನಿಜವೇ?

ಇ) ಕಾರ್ಯಪ್ರಗತಿಯಲ್ಲಿರುವ ಯೋಜನೆಗಳಿಗೆ ಪ್ರತಿ ವರ್ಷ ನಿಗಧಿಗೊಳಿಸಲ್ಪಟ್ಟಿರುವ ಮೊತ್ತವೆಷ್ಟು, ಮತ್ತು ಪ್ರಸ್ತುತ ಅಭಿವೃದ್ಧಿಯ ಮಟ್ಟದಲ್ಲಿ ಈ ಯೋಜನಾ ಕಾರ್ಯಗಳು ಪೂರ್ಣಗೊಳಿಸಲು ಎಷ್ಟು ಕಾಲಾವಧಿ ಬೇಕಾಗುತ್ತದೆ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ)

ವರ್ಷ	ಇಂಧನ ವೆಚ್ಚ	ಸಾಗಾಣಿಕೆ ವೆಚ್ಚ	ನಿರ್ವಹಣಾ ಸಿಬ್ಬಂದಿ ವೆಚ್ಚ
೧೯೮೦–೮೧	೪೭.೬೫	೨.೩೩%	೧೧.೩೨%
೧೯೮೧–೮೨	೫೧.೧೬	೩.೩೮%	೮.೩೭%
೧೯೮೨–೮೩	೩೯.೫೮	೩.೪೬%	೧೮.೧೮%
೧೯೮೩–೮೪	೪೪.೦೭	೨.೯೩%	೮.೨೬%
೧೯೮೪–೮೫	೫೪.೧೭	೨.೫೭%	೧೦.೦೮%
೧೯೮೫–೮೬	೩೨.೪೭	೧.೯೦%	೧೪.೫೩%
೧೯೮೬–೮೭	೨೭.೪೯	೨.೧೮%	೧೧.೫೬%

ಆ) ವಿಜಯವಲ್ಲ.